ಪ್ರಶ್ನೆಗೆ ಆಕೆಯಿಂದ ತಟ್ಟನೆ ಉತ್ತರಿಸಲಾಗದೆ... ನಿಧಾನಕ್ಕೆ ಕಣ್ತುಂಬಿಕೊಂಡೇ, "ಅಪ್ಪನಲ್ಲಿ ಕೇಳಿ ಹೇಳ್ತೇನೆ ಮಗಾ... ಊರಿಗೆ ನಾವು ಹೋಗ್ಲೇ ಬೇಕು, ಈಗ ಮೊದಲು ಬ್ರಶ್ ಮಾಡ್ಕೊಂಡ್ ಬಾ ಚಿನ್ನ... ಇಬ್ರೂ ತಿಂಡಿ ತಿನ್ನೋಣ" ಎಂದು ಮಗನನ್ನು ಸ್ನಾನದ ಮನೆಗೆ ಕಳುಹಿಸಿ, ನಿನ್ನೆ ರಾತ್ರಿ ತಾನು ಗಂಡನ ಜೊತೆ ನಡೆಸಿದ್ದ ವಾದದ ಬಗ್ಗೆಯೇ ಮತ್ತೆ ಯೋಚನೆಗೆ ಬಿದ್ದಿದ್ದಳು.

ನಿನ್ನೆ ರಾತ್ರಿ, ಕೌಶಿಕನ ಅಪ್ಪ ಅಕ್ಷಯಕುಮಾರನು, "ಮುಂದಿನ ವರ್ಷ ಹೊಸ ಐಸಿಎಸ್ಸಿ ಶಾಲೆಯಲ್ಲೇ ಈತನ ಹೊಸ ಕಲಿಕೆ ಆರಂಭ; ಮಗನ ಕಲಿಕೆ ಬರಿಕೆ, ಶಾಲೆಯ ಆಯ್ಕೆಯಲ್ಲಿ ನೀನು ಮೂಗು ತೂರಿಸುವ ಅಗತ್ಯವಿಲ್ಲ..." ಎಂಬ ಫರ್ಮಾನನ್ನು ಹೊರಡಿಸಿದ್ದ ನಂತರದಲ್ಲಿ ನಾಳೆ ತನ್ನ ಮಗುವಿಗೆ ಒದಗಿ ಬರಬಹುದಾದ 'ಕಲಿಕೆಯ ಸಂಕಟ'ವನ್ನು, ಅದ್ರಲ್ಲೂ ಆತನ ಗಣಿತದ ಸಂಕಟವನ್ನು ಕಲ್ಪಿಸಿಕೊಂಡೇ ಆಕೆ ಆತಂಕಿತಳಾಗಿ, ಅಧೀರಳಾಗಿ, ನಿದ್ದೆಯಿಲ್ಲದ ರಾತ್ರಿಯನ್ನು ಕಳೆದಿದ್ದಳು.

ಮಗು ಕೌಶಿಕ ಈಗೆರಡು ವರ್ಷಗಳಿಂದ ಯಾವಾಗ ಪ್ರೀ ಸ್ಕೂಲ್, ನರ್ಸರಿ ಸ್ಕೂಲಿನ ಮೆಟ್ಟಿಲೆಂಬುದನ್ನು ಹತ್ತಿದನೋ... ಅಲ್ಲಿಂದಲೇ ಕುಮುದಳ ಯಮಯಾತನೆಯ ದಿನಗಳು ಆರಂಭಗೊಂಡಿದ್ದವು. ನರ್ಸರಿಯಲ್ಲಿ ಮಗುವಿಗಿನ್ನು ಅಕ್ಷರಗಳ ಪರಿಚಯವಾಗುತ್ತಿದೆಯಷ್ಟೆ... ಅಷ್ಟರಲ್ಲೆ ಅಪ್ಪ ಅಕ್ಷಯಕುಮಾರ ದಿನವೂ ರಾತ್ರಿ ಮನೆಯಲ್ಲಿ ಮಗುವಿನ ಕೈಯಲ್ಲಿ ಒಂದರಿಂದ ಐವತ್ತರವರೆಗೆ ಬರೆಸತೊಡಗಿದ್ದ. ಮಗು ಅತ್ತು ಕರೆದು... ಹೆಚ್ಚೆಂದರೆ ಹತ್ತರವರೆಗೆ ಹಾಗೂ ಹೀಗೂ ಬರೆದು... ನಿದ್ದೆಗೆ ಜಾರತೊಡಗಿದಂತೆ... ಆತ ಸಿಟ್ಟಿನಿಂದ ನಡುಗುತ್ತ, ಅಬ್ಬರಿಸಲು ಆರಂಭಿಸುತ್ತಿದ್ದ. ರಾತ್ರಿ ಅಪ್ಪ ಮಗುವನ್ನು ಎದುರಿಗೆ ಕೂರಿಸಿಕೊಂಡು "ಬರೆಯೋ... ಕತ್ತೆ" ಎಂದು ಅಬ್ಬರಿಸಿದಾಗ, ಒಮ್ಮೆಯೂ ನೆಟ್ಟಗೆ ಬರೆಯದ ಕೌಶಿಕ, ಅಪ್ಪ ಆಫೀಸಿಗೆ ಹೊರಟನೆಂದರೆ ಸಾಕುಬಣ್ಣ ಬಣ್ಣದ ಕ್ರೆಯನ್ ಪೆನ್ಸಿಲ್ಸ್ ಹಿಡಿದು, ಗೋಡೆ ಇಡೀ ಒಂದರಿಂದ ಹತ್ತರವರೆಗೆ ಬರೆಯುತ್ತಿದ್ದ. ಕುಮುದಳಿಗೆ ಅದನ್ನು ಒರೆಸುವುದೇ ದೊಡ್ಡ ಕೆಲಸವಾಗುತ್ತಿತ್ತು. ನನ್ನ ಮುಂದೆ ಬರೆಯದ ಇವನು ಬಾಡಿಗೆ ಮನೆಯ ಗೋಡೆಯಲ್ಲಿ ಬಣ್ಣದ ಪೆನ್ಸಿಲ್‌ನಲ್ಲಿ ಬರಿತಾನೇನೋ ಎಂದು ಅಪ್ಪ ಸಿಟ್ಟಿಗೆದ್ದರೂ ಎದ್ದಾನು ಎಂಬ ಭಯ ಕುಮುದಳಿಗೆ.

"...ಈ ಮಗ್ಗಿ, ಈ ಗಣಿತ, ಈ ಕೂಡು–ಕಳೆ, ಈ ಮಿಸ್ಸಿಂಗ್ ನಂಬರ್ಸ್ ಇವು ಯಾವುವೂ ತನ್ನ ಲೋಕದವಲ್ಲ..., ಇವೆಲ್ಲವೂ ತನ್ನ ಲೋಕಕ್ಕೆ ಸಲ್ಲದ 'ಜ್ಞಾನ ಪರಿಕರ'ಗಳು; ಈ 'ಪರಿಕರ'ಗಳು ಏನಿದ್ದರೂ ತನ್ನ ತರಗತಿಯ ಇತರ ಮಕ್ಕಳದ್ದು ಅಥವಾ ತನ್ನ ಅಪ್ಪನದ್ದು" ಎಂದು ಸದಾ 'ಪರಿಭಾವಿಸುವ' ಈ ಕೌಶಿಕಕುಮಾರ, ಅಪ್ಪರ್ ಕೆಜಿಯ ತನ್ನ ಮಿಸ್ಸು ಗಣಿತದ ಕೂಡುವುದು ಕಳೆಯುವುದನ್ನು ಕರಿಬೋರ್ಡ್‌ನಲ್ಲಿ ಕಲಿಸುವಾಗಲೆಲ್ಲ ಆಕೆಯನ್ನು ತದೇಕಚಿತ್ತನಾಗಿ ಗಮನಿಸುವವನಾದರೂ, ಆತನ ತಲೆಯಲ್ಲಾಗ ಓಡಾಡುತ್ತಿರುವುದೆಲ್ಲ ಅವನ ಅಜ್ಜಯ್ಯನ ಊರಲ್ಲಿರುವ ಕೆರೆ ತೋಡುಗಳು, ಅವುಗಳಲ್ಲಿ ಏನೇನೂ ಪಿಕೀರಿಲ್ಲದೆ ಈಜಾಡುವ ಮೀನುಗಳು ಅಥವಾ ದಿನವೂ ತಾನು ಶಾಲೆಗೆ ಬರುವ ದಾರಿಯಲ್ಲಿ ಕಾಣಿಸುವ ನಾಯಿಮರಿಗಳದ್ದೇ ಕಾರುಬಾರು.

ಈ ಮಗುವಿಗಂತೂ ಗಣಿತದ ಬಗ್ಗೆ ಕಿಂಚಿತ್ತೂ ಒಲವಿಲ್ಲ –ಎಂದು ತಿಳಿದಿದ್ದ ಆತನ ಲೋವರ್ ಕೇಜಿ ಮಿಸ್ಸು, ಈತನ ತಲೆಗೆ ಗಣಿತದ ಕೂಡು–ಕಳೆ ಹತ್ತಿಸುವುದು ತನ್ನ ಕೈಲಾಗದು ಎಂದು ಸಾಕಷ್ಟು ಬಾರಿ ಅಂದುಕೊಂಡಿದ್ದರೂ, ತನಗೆ ತನ್ನ ತಾಯಿಯು ಕಲಿಸಿದ್ದಂತೆ ಕಡಲೆಬೀಜ, ಜೆಮ್ಸ್‌ಗಳನ್ನೆಲ್ಲ ಆತನ ಎದುರಿಗೆ ಇಟ್ಟು ಕೂಡು–ಕಳೆಯುವುದನ್ನು ಆತನಿಗೆ ಕಲಿಸಿಬಿಟ್ಟು ತಾನು